**<u>3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.</u>**

**<u>ಸತ್ರ ಪ್ರಕರಣ ಸಂಖ್ಯೆಃ 46/2023</u>**

ದಿನಾಂಕಃ 16.01.2025
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ದೋ.ಪ. -9 ಅ.ಸಾ -8

| | | |
|---|---|---|
| ಹೆಸರು | ಃ | ಶ್ರೀ. ರಾಜು |
| ತಂದೆಯ ಹೆಸರು | ಃ | ದೇವೇಗೌಡ |
| ವಯಸ್ಸು | ಃ | 26 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸಸ್ಥಳ | ಃ | ನೇರಳೂರು |

**<u>ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

ನನಗೆ ಈ ಪ್ರಕರಣದ ಆರೋಪಿಗಳು ಮತ್ತು ಮೃತ ಶಿವು ಗೊತ್ತಿಲ್ಲ. ದೋ.ಪ.ಸಾಕ್ಷಿ-10 ನನಗೆ ಗೊತ್ತು. ಸುಮಾರು ಒಂದುವರೆಯಿಂದ ಎರಡು ವರ್ಷಗಳ ಹಿಂದೆ ಮದ್ಯಾಹ್ನ ಸುಮಾರು 12.30 ರಿಂದ 1.00 ಗಂಟೆ ಸಮಯದಲ್ಲಿ ಗದ್ದೆಗೆ ನೀರು ಕಟ್ಟಿ ಊರ ಕಡೆಗೆ ಹೋಗುತ್ತ ಇದ್ದೆ. ತಮ್ಮೇಗೌಡರ ಜಮೀನಿನಲ್ಲಿ ಪೊಲೀಸರು ಮಹಜರ್ ಮಾಡುತ್ತಿದ್ದು ನಾನು ಹೋಗಿ ನಿಂತುಕೊಂಡಿದ್ದು ನಂತರ ಪೋಲಿಸರು ನನ್ನ ಬಳಿ ಸಹಿ ಮಾಡಿಸಿಕೊಂಡಿರುತ್ತಾರೆ. ಅಲ್ಲಿ ನುಣ್ಣೂರಿನ ಒಬ್ಬ ವ್ಯಕ್ತಿ ಸತ್ತು ಬಿದ್ದಿದ್ದು ಯಾರೋ ಹೊಡೆದಿರುತ್ತಾರೆ ಎಂದು ಮಾತಾನಾಡುತ್ತಿದ್ದರು. ನಂತರ ನಾನು ಈ ಪ್ರಕರಣದ ಸಂಬಂಧವಾಗಿ ಯಾರನ್ನು ಎಲ್ಲಿಯೂ ನೋಡಿಲ್ಲ. ಮಹಜರ್ ಮಾಡಿದ ಸ್ಥಳದಿಂದ ಸುಮಾರು ಅರ್ಧ ಕಿ ಮೀ ದೂರದಲ್ಲಿ ನಮ್ಮ ಜಮೀನು ಇರುತ್ತದೆ. ಈ

ಪ್ರಕರಣ ಕುರಿತು ಬೇರೆ ಏನು ನನಗೆ ಗೊತ್ತಿಲ್ಲ. ಪೋಲಿಸರ ಮುಂದೆ ನಾನು ಯಾವುದೇ ಘಟನೆ ಕಣ್ಣಾರೆ ನೋಡಿರುವ ಕುರಿತು ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಅಭಿಯೋಜಕರು ಕೋರಿರುತ್ತಾರೆ. ವಾದ ಆಲಿಸಿರುತ್ತದೆ. ಪ್ರಕರಣದ ಕಡತವನ್ನು ಪರಿಶೀಲಿಸಿದ್ದು ಸಾಕ್ಷಿ ತನ್ನ ದಿನಾಂಕ 30.10.2022 ರ ಹೇಳಿಕೆ ಪ್ರಕಾರ ಸಾಕ್ಷ್ಯ ಹೇಳದೇ ಇರುವುದು ಕಂಡುಬಂದಿದ್ದು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)

**<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

ದಿನಾಂಕ 28.10.2022 ರ ರಾತ್ರಿ 11.45 ರ ಸುಮಾರಿಗೆ ನಾನು ಮತ್ತು ದೋ.ಪ.ಸಾಕ್ಷಿ-10 ಜಮೀನಿನಲ್ಲಿ ನೀರು ಹರಿಸುತ್ತಿದ್ದೇವು ಎನ್ನುವುದು ಸರಿ ಅಲ್ಲ. ಅದೇ ಸಮಯಕ್ಕೆ ನಮ್ಮ ಗ್ರಾಮದ ತಮ್ಮಣ್ಣನವರ ಜಮೀನಿನ ಮುಂದಿನ ರಸ್ತೆಯಲ್ಲಿ ಕೂಗಾಡುವ ಶಬ್ಧ ಕೇಳಿಸಿತು ಎನ್ನುವುದು ಸರಿ ಅಲ್ಲ. ರಸ್ತೆ ಉದ್ದಕ್ಕೂ ವಿದ್ಯುತ್ ದೀಪದ ಕಂಬಗಳಿದ್ದು ಅವುಗಳ ಬೆಳಕಿನಲ್ಲಿ ನಾವು ಆರೋಪಿ-1 ರವರ ಜೊತೆಯಲ್ಲಿ ಆರೋಪಿ-2 ಮತ್ತು 3 ರವರು ಇದ್ದು ಕೈಯಲ್ಲಿದ್ದ ದೊಣ್ಣೆಗಳಿಂದ ಶಿವು ತಲೆ ಮತ್ತು ಕೈ ಕಾಲುಗಳಿಗೆ ಹೊಡೆಯುತ್ತಿದ್ದು ನಂತರ ಆರೋಪಿ-1 ಒಬ್ಬನ ಕೈಯಲ್ಲಿದ್ದ ದೊಣ್ಣೆ ಕಿತ್ತುಕೊಂಡು ಶಿವುನ ಕೈ ಕಾಲುಗಳಿಗೆ ಸಿಕ್ಕ ಸಿಕ್ಕ ಕಡೆ ಹೊಡೆದಿರುವುದನ್ನು ನಾವು ನೋಡಿರುತ್ತೇವೆ ಎನ್ನುವುದು ಸರಿ ಅಲ್ಲ.

ಆ ಸಮಯಕ್ಕೆ ಶಿವು ಮೈ ಮೇಲೆ ಶರ್ಟ್ ಇರಲಿಲ್ಲ, ತಪ್ಪಿಸಿಕೊಳ್ಳಲು ತಮ್ಮಣ್ಣ ಜಮೀನಿನಲ್ಲಿ ಹೋದಾಗ ಮತ್ತೆ ಮೂರು ಜನ ಸೇರಿಕೊಂಡು ದೊಣ್ಣೆಗಳಿಂದ ಹೊಡೆದು ಶಿವು ಕೊಲೆ ಮಾಡಿರುತ್ತಾರೆ ಎನ್ನುವುದು ಸರಿ ಅಲ್ಲ. ನಂತರ ಆರೋಪಿ-1 ನುಣ್ಣೂರು ಕಡೆಗೆ ಹೋಗಿದ್ದು ಉಳಿದ ಇಬ್ಬರು ಆರೋಪಿಗಳು ಮೋಟಾರ್ ಸೈಕಲ್ ನಲ್ಲಿ ಅಲ್ಲಿಂದ ಹೋಗಿರುತ್ತಾರೆ ಎನ್ನುವುದು ಸರಿ ಅಲ್ಲ. ನಂತರ ನಾವು ಗಾಬರಿಕೊಂಡು ಜಮೀನಿಗೆ ನೀರು ಹಾಯಿಸಲು ಹೋಗಿದ್ದು ಬೆಳಿಗ್ಗೆ 7.00 ಗಂಟೆಗೆ ವಾಪಸ್ಸು ಊರಿನ ಕಡೆಗೆ ಹೊರಟಾಗ ಸ್ಥಳದಲ್ಲಿ ಅಕ್ಕೂರು ಪೊಲೀಸರು ಮತ್ತು ಶಿವು ಸಂಬಂಧಿಕರು ಇದ್ದರು ಎನ್ನುವುದು ಸರಿ ಅಲ್ಲ.

ದಿನಾಂಕ 30.10.2022 ರಂದು ಕೊಲೆ ಆದ ಜಾಗಕ್ಕೆ ಪೊಲೀಸರು ಮಹಜರ್ ಗೆ ಎಂದು ಇಬ್ಬರು ವ್ಯಕ್ತಿಗಳನ್ನು ಕರೆ ತಂದಿದ್ದು ನಾನು ಅವರನ್ನು ನೋಡಿ ಗುರುತಿಸಿದ್ದು ಅವರುಗಳು ಆರೋಪಿ-2 ಮತ್ತು 3 ಆಗಿದ್ದು ಆರೋಪಿ-2 ಆರೋಪಿ-1 ರವರ ಭಾವ ಮೈದುನ ಎಂದು ಗೊತ್ತಾಗಿರುತ್ತದೆ ಎನ್ನುವುದು ಸರಿ ಅಲ್ಲ. ನಾನು ಕೊಲೆ ಆದ ಸಮಯಕ್ಕೆ ಹಾಜರಿದ್ದು ಕೊಲೆ ಮಾಡಿದ್ದು ಕಣ್ಣಾರೆ ನೋಡಿದ್ದು ಮಹಜರ್ ಸಮಯಕ್ಕೆ ಆರೋಪಿ-2 ಮತ್ತು 3 ರವರನ್ನು ನೋಡಿ ಗುರುತಿಸಿದ್ದೆ ಎನ್ನುವುದು ಸರಿ ಅಲ್ಲ. ಆರೋಪಿಗಳೊಂದಿಗೆ ರಾಜಿ ಮಾಡಿಕೊಂಡಿರುವುದರಿಂದ ಅವರುಗಳಿಗೆ ಶಿಕ್ಷೆ ಆಗುವುದನ್ನು ತಪ್ಪಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿ ಅಲ್ಲ.

ದಿನಾಂಕ 30.10.2022 ರಂದು ಮೇಲೆ ಸೂಚಿಸಿದಂತೆ ನಡೆದಿರುವುದರ ಕುರಿತು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿ ಅಲ್ಲ. ಹೇಳಿಕೆಯನ್ನು **ನಿಪಿ-15** ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಇಲ್ಲಃ</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ರಾಘವೇಂದ್ರ. ಜಿ)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.